# ದಿನಾಂಕ:29–05–2010ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು

ವಿಷಯದ ಸಂಖ್ಯೆ:42/10–11

ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಎನ್. ಸತ್ಯನಾರಾಯಣರವರು ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಕರ್ನಾಟಕ ಸರ್ಕಾರದ ದಿನಾಂಕ:16–01–2007ರ ಅಧಿಸೂಚನೆ ಮೇರೆಗೆ 198 ವಾರ್ಡ್ ಜನಪ್ರತಿನಿಧಿಗಳನ್ನು ಒಳಗೊಂಡಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಪಾಲಿಕೆ ಕೌನ್ಸಿಲ್ ಸಭೆಯು ಅಸ್ತಿತ್ವಕ್ಕೆ ಬಂದಿರುತ್ತದೆ. ಪಾಲಿಕೆಯ ಕೌನ್ಸಿಲ್ ಕಾರ್ಯಾಲಯದ ರೆಕಾರ್ಡಿಂಗ್ ಕೆಲಸ ಕಾರ್ಯಗಳಿಗೆ ಹೆಚ್ಚಿನ ಒತ್ತಡ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ಕೆಲಸ ಕಾರ್ಯಗಳು ಸುಗಮವಾಗಿ ನಡೆದುಕೊಂಡು ಹೋಗುವ ಹಿತದೃಷ್ಟಿಯಿಂದ ಹಾಲಿ ಇರುವ ಎಂಟು ಜನ ವರದಿಗಾರರು ಹಾಗೂ ಒಂದು ರೆಕಾರ್ಡಿಂಗ್ ಅಧಿಕಾರಿಗಳ ಜೊತೆಗೆ ಅಧಿಕವಾಗಿ ಎಂಟು ಜನ ವರದಿಗಾರರ ಹುದ್ದೆಗಳನ್ನು ಹೊಸದಾಗಿ ಸೃಜಿಸಲು ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ್ದು, ಈ ಸಂಬಂಧ ಕೌನ್ಸಿಲ್ ರೆಕಾರ್ಡಿಂಗ್ ಕೆಲಸಕಾರ್ಯಗಳ ಹಿತದೃಷ್ಟಿಯಿಂದ ಹಾಗೂ ಕೌನ್ಸಿಲ್ ಸಭೆಯು ಹೆಚ್ಚಾಗಿ ಕನ್ನಡ ಭಾಷೆಯಲ್ಲಿಯೇ ನಡೆಯುತ್ತಿರುವ ಹಿನ್ನೆಲೆಯಲ್ಲಿ, ಹಾಲಿ ಇರುವ ವರದಿಗಾರರ ಹುದ್ದೆಗಳ ಜೊತೆಗೆ ಎಂಟು ಜನ ಕನ್ನಡ ವರದಿಗಾರರ ಹುದ್ದೆಗಳನ್ನು ಹೆಚ್ಚುವರಿಯಾಗಿ ಸೃಜಿಸಲು ಹಾಗೂ ಹಾಲಿ ಈ ಹುದ್ದೆಗಳಿಗಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಮುಂದುವರೆಸುತ್ತಾ, ಸದರಿ ವೃಂದ ಮತ್ತು ನೇಮಕಾತಿ ನಿಯಮಾವಳಿ ಅನುಸಾರ ಹೆಚ್ಚುವರಿ ಹುದ್ದೆಗಳನ್ನು ಸಹ ಕೂಡಲೇ ಭರ್ತಿ ಮಾಡುವುದು.

ಶ್ರೀ ಬಿ.ಎನ್. ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಶ್ರೀ ಪಿ.ಎನ್. ಸದಾಶಿವರವರು ಅನುಮೋದಿಸಿದರು

ಮಹಾಪೌರರು ನಿರ್ಣಯವನ್ನು ಮತಕ್ಕೆ ಹಾಕಲಾಗಿ ಸಭೆಯು ಬಹುಮತದಿಂದ ಒಪ್ಪಿದೆ ಎಂದು ತೀರ್ಮಾನಿಸಿತು.

ನಿರ್ಣಯ:– ಸರ್ಕಾರದ ಅನುಮೋದನೆ ನಿರೀಕ್ಷಿಸಿ, ಹೆಚ್ಚುವರಿ ಎಂಟು ಕನ್ನಡ ವರದಿಗಾರರ ಹುದ್ದೆಗಳನ್ನು ಈ ಕೂಡಲೇ ಭರ್ತಿ ಮಾಡುವ ಬಗ್ಗೆ ಆಯುಕ್ತರು ಕ್ರಮ ತೆಗೆದು ಕೊಳ್ಳುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಎಸ್. ಕೆ. ನಟರಾಜ

(ಎಸ್.ಕೆ.ನಟರಾಜ)

ಮಹಾಪೌರರು